ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರ ನೇಮಕಾತಿ

271 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು? ಎಷ್ಟು ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇವೆ? ಇವುಗಳನ್ನು ತುಂಬಲು ಕೈಗೊಂಡ ಕ್ರಮಗಳೇನು? ಇವುಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಗಳು ಎಷ್ಟು?

ಆ) ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಅನುಸರಿಸುತ್ತಿರುವ ನಿಯಮಗಳು ಯಾವುವು? ಇದರಲ್ಲಿ ಸ್ಥಳೀಯರಿಗೆ ಕಟ್ಟುನಿಟ್ಟಾಗಿ ನೇಮಕಾತಿಯನ್ನು ನೀಡಲು ಕ್ರಮವನ್ನು ಅನುಸರಿಸಲಾಗುತ್ತಿದೆಯೇ?

ಇ) ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳನ್ನು ಇನ್ನೆಷ್ಟು ದಿನಗಳಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) 643

616 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆಯಲಾಗಿದೆ.

ಈ ಹುದ್ದೆಗಳಿಗೆ ಯಾವುದೇ ವಿದ್ಯಾರ್ಹತೆ ನಿಗದಿಪಡಿಸಿರುವುದಿಲ್ಲ.

ಆ) ವ್ಯಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ನೇರ ನೇಮಕಾತಿಯ ನಿಯಮದಂತೆ ಸ್ಥಳೀಯರಿಗೆ ಕಟ್ಟುನಿಟ್ಟಾಗಿ ನೇಮಕಾತಿ ಮಾಡಬೇಕೆಂಬ ನಿಯಮವಿರುದಿಲ್ಲ.

ಇ) ಅದಷ್ಟು ಶೀಘ್ರವಾಗಿ

ರಾಜ್ಯದಲ್ಲಿ ಪ್ರವಾಹದಿಂದ ಉಂಟಾಗಿರುವ ಹಾನಿ

266 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಪ್ರವಾಹದಿಂದ ಯಾವ ಯಾವ ಜಿಲ್ಲೆಗಳು ನಷ್ಟಕ್ಕೆ ಒಳಗಾಗಿವೆ?

ಆ) ಈ ಜಿಲ್ಲೆಗಳಲ್ಲಿ ಆಗಿರತಕ್ಕ ನಷ್ಟದ ಅಂದಾಜಿನ ಪ್ರಮಾಣ ಎಷ್ಟು?

ಇ) ಈ ಪ್ರವಾಹಗಳಿಂದ ಸತ್ತ ಜನರ ಸಂಖ್ಯೆ ಎಷ್ಟು?

ಈ) ಪರಿಹಾರ ಹಾಗೂ ಪುನರ್ವಸತಿಗಾಗಿ ರಾಜ್ಯ ಸರ್ಕಾರವು ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ರಾಜ್ಯ ಸರ್ಕಾರವು ಪರಿಹಾರಕ್ಕಾಗಿ ಎಷ್ಟು ಹಣವನ್ನು ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದೆ?

ಊ) ಕೇಂದ್ರ ಸರ್ಕಾರವು ಪ್ರವಾಹ ಪರಿಹಾರಕ್ಕಾಗಿ ರಾಜ್ಯಕ್ಕೆ ನೀಡಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಈ ಕೆಳಕಂಡ ಜಿಲ್ಲೆಗಳು ಇತ್ತೀಚಿನ ನೆರೆ ಹಾವಳಿಗೆ ತುತ್ತಾಗಿವೆ -

1. ಬೆಳಗಾವಿ 2. ಬಳ್ಳಾರಿ 3. ಬಿಜಾಪುರ 4. ಚಿಕ್ಕಮಗಳೂರು 5. ಚಿತ್ರದುರ್ಗ 6. ಹಾಸನ 7. ದಕ್ಷಿಣ ಕನ್ನಡ 8. ಧಾರವಾಡ 9. ಶಿವಮೊಗ್ಗ 10. ಕೊಡಗು 11. ಕೋಲಾರ 12. ಮಂಡ್ಯ 13. ಮೈಸೂರು ಮತ್ತು 14. ಉತ್ತರ ಕನ್ನಡ

ಆ) ಜಿಲ್ಲಾಧಿಕಾರಿಗಳ ಅಂತಿಮ ವರದಿಯಂತೆ ನೆರೆ ಹಾವಳಿಯಿಂದಾದ ನಷ್ಟ ರೂ. 16646.76 ಲಕ್ಷಗಳು